C.C.. No. 450/2024 CW:9 ,PW:7

**1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು , ದ.ಕ.**

ಸಿ.ಸಿ. ನಂಃ 450/2024
ಸಿ.ಡಬ್ಲ್ಯೂಃ 9
ಪಿ.ಡಬ್ಲ್ಯೂಃ 7

ಸಾಕ್ಷಿದಾರರ ಹೆಸರುಃ ಅಬ್ದುಲ್ ಷರೀಫ್

ತಂದೆಯ ಹೆಸರುಃ ಮಹಮ್ಮದ್ ಅಬ್ದುಲ್ಲಾ

ವಯಸ್ಸುಃ 38 ವರ್ಷ

ಉದ್ಯೋಗಃ ಸೌದಿ ಯಲ್ಲಿ ಉದ್ಯೋಗ

ವಾಸಸ್ಥಳಃ ಕಾರ್ಕಳ ತಾಲೂಕು

ದಿನಾಂಕ 23-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿಗೆ ಸ್ವತ್ತು ಸ್ವಾಧೀನತಾ ಮಹಜರು ಹಾಗೂ ಸ್ವತ್ತು ಬಿಡುಗಡೆ ಮಹಜರು ತೋರಿಸಲಾಗಿ ಅವುಗಳಲ್ಲಿ ಕಾಣುವ ತನ್ನ ಸಹಿಗಳನ್ನು ಗುರುತಿಸಿದ್ದು ಸದರಿ ದಾಖಲೆಗಳನ್ನು ಕ್ರಮವಾಗಿ ನಿ.ಪಿ.4 ಹಾಗೂ ನಿ.ಪಿ.5 ಎಂದು ಹಾಗೂ ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿ.ಪಿ.4(ಎ) ಮತ್ತು ನಿ.ಪಿ.5(ಎ) ಎಂದು ಗುರುತಿಸಲಾಯಿತು. ಸುಮಾರು 2 ವರ್ಷಗಳ ಹಿಂದೆ ಸಂಪ್ಯ ಪೊಲೀಸು ಠಾಣೆಯಲ್ಲಿ ನಿ.ಪಿ.4 ಮತ್ತು ನಿ.ಪಿ.5 ದಾಖಲೆಗಳಿಗೆ ಸಹಿ ಮಾಡಿದ್ದೇನೆ. ನನ್ನ ಸಮಕ್ಷಮ ಪೊಲೀಸರು ಯಾವುದೇ ಕಾರನ್ನು ತಮ್ಮ ವಶ ಪಡೆದಿಲ್ಲ ಹಾಗೂ ಬಿಡುಗಡೆ ಮಾಡಿಲ್ಲ. ನಿ.ಪಿ.4 ಮತ್ತು ನಿ.ಪಿ.5 ದಾಖಲೆಗಳಲ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ. ನಿ.ಪಿ.3 ಬಾವಚಿತ್ರದಲ್ಲಿ ಕಾಣುವ ಕಾರನ್ನು ನಾನು ಈ ಮೊದಲು ಎಲ್ಲಿಯೂ ನೋಡಿಲ್ಲ.

ನನಗೆ 3ನೇ ಆರೋಪಿಯ ಪರಿಚಯ ಇದೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ತಮಗೆ ಪಾಟೀ ಸವಾಲು ಮಾಡಲು ಅವಕಾಶ ನೀಡಬೇಕೆಂದು ಕೋರಿದ್ದು , ವಾದವನ್ನು ಆಲಿಸಿ, ದಾಖಲೆಗಳನ್ನು ಪರಿಶೀಲಿಸಿದ ನಂತರ ಸದರಿ ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 15-01-2023 ರಂದು ಆರೋಪಿತರು ಕೃತ್ಯದ ನಂತರ ಪರಾರಿ ಆಗಲು ಬಳಸಿದ ಕೆಎ-19-ಎಂಎಂ-0722 ಕಾರನ್ನು ಅದರ ಮಾಲೀಕರಾದ 3ನೇ ಆರೋಪಿಯು ಸಂಪ್ಯ ಪೊಲೀಸು ಠಾಣೆಗೆ ತಂದು ಹಾಜರುಪಡಿಸಿದಾಗ ಪೊಲೀಸರು ನನ್ನ ಹಾಗೂ ಚಾ.ಸಾ10 ರವರ ಸಮಕ್ಷಮ ನಿ.ಪಿ.4 ರಂತೆ ಮಹಜರನ್ನು ತಯಾರಿಸಿ ಕಾರನ್ನು ತಮ್ಮ ವಶಕ್ಕೆ ಪಡೆದಿದ್ದಾರೆ ಮತ್ತು ಆ ಸಮಯದಲ್ಲಿ ನಾನು ನಿ.ಪಿ.4 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 30-01-2024 ರಂದು ಪುತ್ತೂರು ಗ್ರಾಮಾಂತರ ಪೊಲೀಸು ಠಾಣೆಯಲ್ಲಿ ನಿ.ಪಿ.3 ರಲ್ಲಿ ಕಾಣುವ ಕಾರನ್ನು ಅದರ ಮಾಲೀಕರಾದ 3ನೇ ಆರೋಪಿಗೆ ಬಿಡುಗಡೆ ಮಾಡುವ ಸಮಯ ನನ್ನ ಹಾಗೂ ಚಾ.ಸಾ.10 ರವರ ಸಮಕ್ಷಮ ನಿ.ಪಿ.5 ರಂತೆ ಮಹಜರನ್ನು ತಯಾರಿಸಿ ನನ್ನ ಸಹಿಯನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

ಆರೋಪಿತರು ನನ್ನ ಪರಿಚಯದವರು ಆಗಿರುವ ಕಾರಣ ಅವರನ್ನು ಶಿಕ್ಷೆಯಿಂದ ರಕ್ಷಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಂ.ಪಿ.ಕೆ. ವಕೀಲರಿಂದಃ**

ಏನೂ ಇರುವುದಿಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು ದ.ಕ.